International Journal of Kannada Research
www.kannadajournal.com

ISSN: 2454–5813
IJKR 2018; 4(1): 01-04
© 2018 IJKR
www.kannadajournal.com
Received: 01-11-2017
Accepted: 02-12-2017

**ಸಂತೋಷ ಲಕ್ಷ್ಮಣ**
ಸಂಶೋಧನಾ ವಿದ್ಯಾರ್ಥಿ,
ಕನ್ನಡ ಅಧ್ಯಯನ್ ಸಂಸ್ಥೆ
ಗುಲ್ಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ

**Correspondence**
**ಸಂತೋಷ ಲಕ್ಷ್ಮಣ**
ಸಂಶೋಧನಾ ವಿದ್ಯಾರ್ಥಿ,
ಕನ್ನಡ ಅಧ್ಯಯನ್ ಸಂಸ್ಥೆ
ಗುಲ್ಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ

# ಈರಪ್ಪ ಎಂ. ಕಂಬಳಿರವರ ಪ್ರಬಂಧಗಳು

**ಸಂತೋಷ ಲಕ್ಷ್ಮಣ**

ಈರಪ್ಪ ಎಂ. ಕಂಬಳಿಯವರು ಹೈದರಾಬಾದ ಕರ್ನಾಟಕ ಲಲಿತ ಪ್ರಬಂಧಕಾರರಲ್ಲಿ ಪ್ರಮುಖರು. ಇವರ ಪ್ರಬಂಧ ಸಂಕಲನಗಳೆಂದರೆ "ಹೆದ್ದಾರಿಗುಂಟ" (1997) "ಹೀಗೊಂದು ಟಾಪ್ ಪ್ರಯಾಣ" (2003) "ಚಾಚಾ ನೆಹರು ಮತ್ತು ಈಚಲುಮರ" (2006) "ಕಳ್ಳೀ ಹಾಲು" (2011)

ಈ ಸಂಕಲನಗಳಲ್ಲಿ ಮುಖ್ಯವಾದ ಪ್ರಬಂಧಗಳೆಂದರೆ, "ಗಾಂಧೀ ಟೊಪ್ಪಿಗೆ ಗೇಟ್‌ಪಾಸ್ ಆದದ್ದು" "ಕಳ್ಳೀಹಾಲು" "ಪಂದ್ರಾ ಅಗಸ್ತು" "ಹುಡ್ತೀತಿ ಆಟದ ಹುದ್ದರಿಗಳು" "ನಾಟ್ಯಕವಿ ಎಂಕಟೇಶಿಯ ಒಂದು ನಾಟಕ ಪ್ರಸಂಗ" "ಮ್ಯಾಜಿಕ್‌ಸ್ಟಿಕ್ ಮ್ಯಾಜಿಕ್‌ಸ್ಟಿಕ್" "ಪರಕಾಸು ನಡೆಸಿದ ಪ್ರಬಂಧ ಸ್ಪರ್ಧೆ" "ಆಯುಷ್ಕರ್ಮ ಶಾಲೆಯಲ್ಲಿ" "ಹೀಗೊಂದು ಟಾಪ್ ಪ್ರಯಾಣ" "ಶಬರಿ ಮಲ್ಯೆ ರಿಮೋಟು" "ಒಂದು ರೈಲು ಭೋಗಿಯ ಅನುಭವ" "ನಾಗಪಂಚಮಿ ನೆನೆದು" "ಒಂದು ಕೆರೆಯ ವೃತ್ತಾಂತ" "ಮಂತ್ರದಂಡಯೂ ಮಾಯಾ ಪೆಟ್ಟಿಗೆಯೂ" ಮುಂತಾದವುಗಳು.

ಇವರ ಪ್ರಬಂಧಗಳಲ್ಲಿ ಕಳೆದುಹೋದ ಗ್ರಾಮೀಣ ಲೋಕದ ಬಗ್ಗೆ ಒಂದು ಬಗೆಯ ಹಳಹಳಿಕೆಯು ನಗರ ಬದುಕಿನ ಬಗ್ಗೆ ಒಂದು ಬಗೆಯ ಅಸಮಾಧಾನವು ಇದೆ. ಇದು ಗ್ರಾಮೀಣ ಲೋಕವನ್ನು ರೋಮ್ಯಾಂಟಿಕ್ ಆಗಿ ಮತ್ತು ವಿಮರ್ಶಾರಹಿತವಾಗಿ ನೋಡಲು ಸಹ ಕಾರಣವಾಗಿದೆ. ತಮ್ಮ ವಾಸ್ತವಿಕವಾದ ಅನುಭವಗಳ ಮೂಲಕ ಒರೆಗೆ ಹಚ್ಚಿ ಸತ್ಯವನ್ನು ಶೋಧಿಸಿದ್ದಾರೆ. ಪ್ರಬಂಧ ರಚನೆಯನ್ನು ಕಂಬಳಿಯವರು ಕೌಧಿ ಹೊಲಿಯುವಿಕೆಗೆ ಹೋಲಿಸಿದ್ದಾರೆ. ಇವರ ಕೆಲ ಪ್ರಬಂಧಗಳು ರೂಪಕ್ಕೆ ಸಂಬಂಧಿಸಿದರೆ ಕೆಲವು ಆಶಯಕ್ಕೆ ಸಂಬಂಧಿಸಿದವುಗಳಾಗಿವೆ.

ಭಾರತ ಇಂದಿನ ದುರಾವಸ್ಥೆಗೆ ಬಾಪೂ ಚಿಂತನೆ ಮತ್ತೆ ಪ್ರಸ್ತುತ ಅನಿಸುತ್ತದೆ. ಆಧುನಿಕ ನಾಗರಿಕ ಜಗತ್ತು ಒಪ್ಪಿದ ಹೊಸ ಸವಾಲುಗಳಿಗೆ ಬಾಲ್ಯದ ನೆನಪಿನ ಬುತ್ತಿಯಾದ ಗಾಂಧೀ ಟೊಪ್ಪಿಗೆ, ಕಂಬಳಿಯವರ ಬಾಲ್ಯ ಕಳ್ಳೀ ಸಾಲಿನೊಂದಿಗೆ ಒಡನಾಟವೇ ಆಗಿದೆ. ಊರಿನ ನಾಕ್ಕೂ ದಿಕ್ಕಿಗೆ ಕೋಟೆಯಂತೆ ಸೊಂಪಾಗಿ ಬೆಳೆದು ನಿಂತು, ಊರಂಚಿನಲ್ಲಿ ಕಾವಲಿನಂತೆ ಗಾಳಿ–ಮರಳು ತಡೆಯುವ ಈ ಕಳ್ಳೀ ಮರಗಳ ಹಾಲಿನ ತೊಟ್ಟು ಕಿತ್ತು ತಂದರೆ ತೊಟ್ಟಲಿಗೂ ಸೈ ಚಟ್ಟಕ್ಕೂ ಸೈ, ಗ್ರಾಮೀಣ ಕ್ರೀಡೆಯಾದ ಕಬಡ್ಡಿಯು ಕಸರಿತ್ತಿನ ಒಂದು ವ್ಯಾಯಾಮವಾಗಿದ್ದರೆ, ಎಂಕಟೇಶಿಯ ನಾಟ್ಯದ ಗೀಳುಗಳಂಥೆ ದೇಸೀ ಪರಂಪರೆಯ ಇಂಥ ಕನವರಿಕೆಯಾಗಿದೆ. ಗ್ರಾಮೀಣ ರಂಗಭೂಮಿಯ ವಿವರಣೆ ಒಂದು ನಾಟಕ ಪ್ರಸಂಗದಲ್ಲಿದೆ. ತ್ರಾಸುದಾಯಕ ಬಸ್ಸಿನ ಪ್ರಯಾಣ, ಢೊಂಗಿ ಭಕ್ತರ ಕುರಿತು ಶಬರಿಮಲ್ಯೆ ರಿಮೋಟಿನಲ್ಲಿದೆ. ರೈಲು ಪ್ರಯಾಣದ ಮೋಜು, ಮಾಯಾ ಪಟ್ಟಿಗೆಯ ಮೋಹಕ ವರ್ಣನೆ ಹೀಗೆ ಹತ್ತು ಹಲವಾರು ಬದುಕಿನ ವಾಸ್ತವ ಸಂಗತಿಗಳನ್ನು ನಯವಾದ ಹಾಸ್ಯ, ಖಾರವಾಗ ವ್ಯಂಗ್ಯ, ಮೊನಚಾದ ವಿಡಂಬನೆಗಳ ಮೂಲಕ ವಿವರಿಸಿದ್ದಾರೆ.

**ಗಾಂಧಿ ಟೊಪ್ಪಿಗೆ ಗೇಟಪಾಸ್ ಆದದ್ದು**

ಭಾರತದ ಹೋರಾಟಗಾರರಲ್ಲಿ ಮಹಾತ್ಮ ಗಾಂಧೀ ಪ್ರಮುಖರು. ದೇಶಕ್ಕೆ ಸ್ವಾತಂತ್ರ ದೊರಕಿಸಿಕೊಡಲು ಗಾಂಧೀಜಿ ಮಾಡಿದ ಹೋರಾಟಗಳು ಅವಿಸ್ಮರಣೀಯವಾಗಿವೆ. ಅಹಿಂಸೆಯ ತತ್ವದ ಮೂಲಕ ಗಾಂಧೀಜಿ ಭಾರತ ಸ್ವಾತಂತ್ರ ಕೊಟ್ಟ ಮಹನೀಯ. ಸ್ವಾತಂತ್ರ ಪೂರ್ವದ ಅದೇಷ್ಟೋ ಜನ ಗಾಂಧೀ ವ್ಯಕ್ತಿತ್ವಕ್ಕೆ ಮಾರುಹೋಗಿ ತಮ್ಮ ಗಂಡು ಮಗುವಿಗೆ ಮೋಹನ ಎಂದು ಹೆಸರಿಟ್ಟು ಕರೆದಿದ್ದರು. ಗಾಂಧೀಜಿ ವಿದೇಶಿಯ ವಸ್ತ್ರಗಳನ್ನು ಧಿಕ್ಕರಿಸಿ ದೇಶಿಯ ಉಡುಗೆಗೆ ಮನ್ನಣೆ ನೀಡಿದರು. ಸ್ವಾತಂತ್ರಕ್ಕಾಗಿ ಗಾಂಧೀ ಮಾಡಿದ ಹೋರಾಟಗಳು ಜನರು ದೇಶದ ಬಗ್ಗೆ ಅಭಿಮಾನ ಬೆಳೆಸಿದವು.

ಹೀಗೆ ಹೋರಾಟ ಮಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ನಮ್ಮ ರಾಷ್ಟ್ರಪಿತ ಗಾಂಧೀಜಿ ಹೆಸರನ್ನು ಅನೇಕ ಕಡೆ ಬಳಸುವುದನ್ನು ನೋಡುತ್ತೇವೆ. ತಲೆ ಬೋಳಿಸಿದರೂ ಗಾಂದೀ ಕಟಿಂಗ್, ರೈಲಿನಲ್ಲಿ ಮೂರನೇ ದರ್ಜೆಯ ಸೀಟಿಗೆ ಗಾಂಧೀ ಕ್ಲಾಸ್, ಇನ್ನು ಪರೀಕ್ಷೆಯಲ್ಲಿ ಮೂರನೇ ಶ್ರೇಣಿ ಪಡೆದರೂ ಗಾಂಧೀ ಕ್ಲಾಸ್ ಎಂದು ಕರೆಯುವುದುಂಟು. ಅಂತಹ ಮಹಾತ್ಮನ ತತ್ವಗಳು ಔಟ ಡೇಟೆಡ್‌ಯಾಗಿಬಿಟ್ಟಿವೆ ಇಂದು. ಗಾಂಧೀ ದೇಶಕ್ಕೆ ಕನಿಷ್ಠ ವ್ಯಕ್ತಿಯೆಂದು ಕಾಣುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ.

**ಪಂದ್ರಾ ಅಗಸ್ತು :**

ಇದೊಂದು ಸ್ವಾತಂತ್ರ್ಯೋತ್ಸವದ ದಿನ ಎಂದು ಎಲ್ಲರಿಗೂ ಗೊತ್ತಿದ ವಿಷಯ. ಏಕೆಂದರೆ 300 ವರ್ಷ ಬ್ರೀಟೀಷರ ಆಳ್ವಿಕೆಗೆ ಒಳಪಟ್ಟು ನಮ್ಮ ದೇಶ ಹಲವಾರು ಹೋರಾಟಗಳು ಮತ್ತು ದೇಶದ ಸ್ವಾತ್ರ್ಯ ಹೋರಾಟಗಾರರ ಪ್ರಾಣ ಮತ್ತು ಬಲಿದಾನಗಳಿಂದ ನಮಗೆ ಸ್ವಾತಂತ್ರ ಸಿಕ್ಕಿದೆ.

15ನೇ ಆಗಷ್ಟ ಎಂದರೆ ಅದೊಂದು ನಮಗೆಲ್ಲ ಸಂಭ್ರಮದ ದಿನ. ಆ ದಿನ ಆಕಾಶವಾಣಿಯಲ್ಲಿ ಪ್ರಸಾರವಾಗುವ "ಏ ಮೇರೆ ವತನ ಕೆ ಲೋಗೊ ಜರಾ ಆಂಖೋ ಮೆ ಭರಲೋ ಪಾನಿ" ಎಂಬ ಗೀತೆಯನ್ನು ಕೇಳಿದರೆ ಸಾಕು ಎಲ್ಲರಿಗೂ ಸ್ವಾತಂತ್ರ್ಯೋತ್ಸವದ ದಿನ ಎಂಬುವುದನ್ನು ಗೊತ್ತಾಗುತ್ತದೆ. ನಾವು ಹುಟ್ಟುವುದರೊಳಗೆ ನಮಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟ ನಾಯಕರಲ್ಲಿ ಒಬ್ಬೊಬ್ಬರು ಅಸ್ತಂಗತರಾಗುತ್ತಿದ್ದರು.

ಹೀಗೆ ನಮ್ಮ ದೇಶದಲ್ಲಿ ಇಂದಿರಾ ಗಾಂಧೀ, ಜವಾಹರಲಾಲ್ ನೆಹರು, ಲಾಲ್ ಬಹಾದ್ದೂರ ಶಾಸ್ತ್ರೀ ಮೊದಲಾದ ನಾಯಕರು ನಮ್ಮ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ್ದನ್ನು ಇಂದು ನಮಗೆ ನೆನಪಿಗೆ ಬರುತ್ತದೆ. 'ಪಂದ್ರಾ ಅಗಸ್ತ' ಎಂದರೆ ಎಲ್ಲರಲ್ಲೂ ಸಡಗರದ ಸಂಭ್ರಮ. ಏಕೆಂದರೆ ನಾವೆಲ್ಲರೂ ನಮ್ಮ ನಮ್ಮ ಬಟ್ಟೆಗಳನ್ನು ಇಸ್ತ್ರೀ ತಂಬಿಗೆಯಿಂದ ಹೊಡೆದು ಬೆಳಿಗ್ಗೆ ಊರಿನಲ್ಲಿ ಪ್ರಭಾತ್ ಫೇರಿ ಮಾಡುವುದು ಬಹು ಸಂಭ್ರಮದಿಂದ ಕಾಣುತ್ತೇವೆ. ಹಾಗೆ ಪ್ರಭಾತ ಫೇರಿ ಮುಗಿದಾದ ಮೇಲೆ ಶಾಲಾ ಆವರಣದಲ್ಲಿ ಸ್ಪರ್ಧೆಯನ್ನು ಏರ್ಪಡಿಸಿ ರಾಷ್ಟ್ರನಾಯಕರನ್ನು ನೆನಪಿಸಿಕೊಳ್ಳುವುದು ಹಾಗೂ ಮಕ್ಕಳಿಗೂ ಭಾರತದ ಏಳಿಗೆಯ ಬಗ್ಗೆ ಅಭಿಮಾನ ಮೂಡಿಸುತ್ತಿರುವ ತನ್ನ ಬಾಲ್ಯ ಪಂದ್ರಾ ಅಗಸ್ತ ದಿನಾಚರಣೆಯ ಬಗ್ಗೆ ಈರಪ್ಪ ಕಂಬಳಿ ವಿವರಿಸಿದ್ದಾರೆ.

**ಕಳ್ಳೀ ಹಾಲು:**

ಹಳ್ಳಿಯ ಬಾಳಿಗೂ ಕಳ್ಳೀಯ ಸಾಲಿಗೂ ಅವಿನಾಭಾವ ಸಂಬಂಧವಿದೆ. ಎಂದು ಲೇಖಕರು ಹೇಳುತ್ತ, ಕಳ್ಳೀ ಗಿಡ ಹಳ್ಳಿಯ ಜನರಿಗೆ ಬಹಳ ಉಪಯಯೋಗಕ್ಕೆ ಬರುತ್ತದೆ ಎನ್ನುತ್ತಾರೆ. ಹಿಂದಿನ ಕಾಲದಲ್ಲಿ ಹಳ್ಳಿಯ ಸುತ್ತಲೂ ಹಸಿರು ಕೋಟೆಯಂತೆ ಸಾಲುಗಟ್ಟಿ ಬೆಳೆದು ನಿಂತಿರುತ್ತಿದ್ದ ಕಳ್ಳೀ ಮರಗಳು ಹಳ್ಳಿಗಳಿಗೆ ಕಳ್ಳರಿಂದ ರಕ್ಷಣೆ ಮಾಡುತ್ತಿದ್ದವು. ಕಳ್ಳೀ ಮರದ ಅಂಟಿನಿಂದ ಗಾಳಿಪಟ ತಯಾರಿಸಲು ಮತ್ತು ಹರಿದ ಪುಸ್ತಕಗಳ ದುರಸ್ತಿ ಮಾಡಲು ಬಳಸುತ್ತಿದ್ದರು. ಜೊತೆಗೆ ಅಂಚೆ ಲಕೋಟೆಗಳನ್ನು ಅಂಟಿಸಲೂ ಕೂಡ ಬಳಸುತ್ತಿದ್ದರು.

ಹಳ್ಳಿಗಳಲ್ಲಿಯ ಹೆಣ್ಣು ಮಕ್ಕಳಿಗೆ ಈ ಕಳ್ಳೀ ಮರಗಳು ಮಲವಿಸರ್ಜನೆ ಮಾಡಲು ಆಸರೆಯಾಗಿ ನಿಂತಿರುತ್ತಿದ್ದವು. ಹಳ್ಳಿಯ ಹೆಂಗಸರು ತಮ್ಮ ವಿಚಾರ ವಿನಿಮಯ ಈ ಕಳ್ಳಿ ಮರಗಳ ಹತ್ತಿರ ನಡೆಯುತ್ತಿತ್ತು. ಕಳ್ಳೀ ಮರಗಳ ಬಲಿತ ಕಾಂಡಗಳನ್ನು ಕಡಿದು ಒಣಗಿಸಿ ಬಡವರು ಮನೆಯ ಮೇಲೆ ಹಾಕಿದರೆ ಮಳೆಯಿಂದ ರಕ್ಷಣೆ ಸಿಗುತ್ತಿತ್ತು. ಕ್ರಿಮಿ–ಕೀಟಗಳ ಭಾಧೆಯನ್ನು ನಿಯಂತ್ರಿಸಲು ಕಳ್ಳೀಗೋನೆ ಬಳಸಿದರೆ 'ಆಲೌಟ್'ನಂತೆ ಕೆಲಸ ಮಾಡುತ್ತಿತ್ತು. ಹೀಗೆ ಬಹುಪಯೋಗಿ ಕಳ್ಳೀ ಗಿಡದ ಕುರಿತು ವಿವರಿಸಿದ್ದಾರೆ.

**ಹುಡ್ತೀತಿ ಆಟದ ಹುದ್ದರಿಗಳು**

ಈ ಪ್ರಬಂಧವು ಗ್ರಾಮೀಣ ಜನಪ್ರೀಯ ಕ್ರೀಡೆಯಾದ 'ಕಬಡ್ಡಿ' ಆಟದ ಕುರಿತು ಬಣ್ಣಿಸಿದೆ. ಇಂದಿನ ಆಟಗಳೊಂದಿಗೆ ಕಬಡ್ಡಿಯನ್ನು ಹೋಲಿಸಿದೆ. ಕ್ರೀಡೆಗಳ ಮಹತ್ವ ಕುರಿತು ವಿಶ್ಲೇಶಿಸುತ್ತದೆ. ಗ್ರಾಮೀಣ ಕ್ರೀಡೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದೆ.

ಕ್ರೀಡೆಗಳು ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡುತ್ತದೆ. ನಾಯಕತ್ವದ ಗುಣಗಳನ್ನು ಬೆಳೆಸುತ್ತದೆ. ಆದರೆ ಪ್ರಸ್ತುತ ದಿನಗಳಲ್ಲಿ ಕ್ರೀಡೆಯಲ್ಲಿ ಬಾಗವಹಿಸಿದರೆ ಸಮಯ ಹಾಳು ಎಂಬ ಮನೋಭಾವನೆ ಹೆಚ್ಚಾಗುತ್ತಿದೆ. ಹೆಚ್ಚು ಹಣ ಗಳಿಸುವ ಕ್ರೀಡೆಗಳನ್ನು ಮಾತ್ರ ಜನಪ್ರೀಯ ಕ್ರೀಡೆಗಳು ಎಂಬ ಅಭಿಪ್ರಾಯ ಹೊಂದಿದ್ದಾರೆ. ಆದರೆ ಕ್ರೀಡೆಗಳು ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿವೆ ಎಂಬುವುದನ್ನು ಗಮನಿಸದೆ ಹೋಗುತ್ತಿವೆ ಎಂದು ವಿವರಿಸಿದ್ದಾರೆ.

**ನಾಟ್ಯ ಕವಿ ಎಂಕಟೇಶಿಯ ಒಂದು ನಾಟಕ ಪ್ರಸಂಗ**

ಈ ಪ್ರಬಂಧದಲ್ಲಿ ಲೇಖಕರ ಸ್ನೇಹಿತನಾದ ವೆಂಕಟೇಶನ ನೇತೃತ್ವದಲ್ಲಿ ಒಂದು ನಾಟಕವಾಡಿದ ಪ್ರಸಂಗವನ್ನು ವಿವರಿಸಿದ್ದಾರೆ. ಎಂಕಟೇಶಿ ಬಾಲ್ಯದಲ್ಲಿಯೇ ನಾಟಕದ ಹವ್ಯಾಸ ಬೆಳೆಸಿಕೊಂಡಿದ್ದ. ಕಾಲೇಜು ಓದುವ ಹಂತದಲ್ಲಿ ಎಂಕಟೇಶಿ ಒಂದು ನಾಟಕ ಬರೆದಿದ್ದ. ನಾಟಕದಲ್ಲಿ ಆಸಕ್ತಿ ಹೊಂದಿರುವ ಎಂಕಟೇಶಿ ಚಿಕ್ಕ ವಯಸ್ಸಿನಲ್ಲಿಯೇ 'ಸಾಹುಕಾರ ಸಾಕಿದ ಸರ್ಪ' ಎನ್ನುವ ನಾಟಕ ಬರೆಯುವ ಮೂಲಕ ಅದನ್ನು ನಾಟಕ ಮಾಡಲು ಪ್ರಯತ್ನಿಸುತ್ತಾನೆ. ಅದಕ್ಕೆ ಬೇಕಾದ ಎಲ್ಲ ಸಿದ್ಧತೆಯನ್ನು ಮಾಡಿಕೊಂಡಿದ ಎಂಕಟೇಶಿ ಅಂದುಕೊಂಡಂತೆ ಎಲ್ಲ ನಡೆದು, ನಾಟಕಕ್ಕೆ ಪಾತ್ರದಾರಿಗಳನ್ನು ಊರಿನ ಗೆಳೆಯರಿಗೆ ವಹಿಸಲಾಯಿತು. ಸ್ತ್ರೀ ಪಾತ್ರದಾರಿಗಳನ್ನು ಬೇರೆ ಊರಿನಿಂದ ಕರೆಯಿಸಿದರು. ನಾಟಕದಲ್ಲಿ ನಾಯಕನ ಪಾತ್ರ ಎಂಕಟೇಶಿ ತಾನೇ ವಹಿಸಿಕೊಂಡ. ನಾಟಕವಾಡಲು ಆರು ತಿಂಗಳು ಕಾಲ ಪೂರ್ವ ತಯಾರಿಗಳೆಲ್ಲ ನಡೆದವು.

ಹೀಗೆ ಊರಿನಲ್ಲಿ ಎಂಕಟೇಶಿಯ ನಾಟಕ ಪ್ರಾರಂಭವಾಗಿ ಯಶಸ್ವೀ ಪ್ರದರ್ಶನಗೊಂಡಿತ್ತು. ಆದರೆ ಎಂಕಟೇಶಿ ಗಳಿಕೆಗಿಂತ ನಷ್ಟವೇ ಅನುಭವಿಸಿದ್ದ. ಆ ನಷ್ಟವನ್ನು ಭರಿಸಲು ಎಂಕಟೇಶಿ ಪಡಬಾರದ ಕಷ್ಟವನ್ನು ಪಟ್ಟನು. ಇಂತಹ ನಾಟಕದ ಹುಚ್ಚು ಹೊಂದಿದ ಹಲವು ಜನ ನಾಟಕವಾಡಲು ಹೋಗಿ ಕೈಸುಟ್ಟಿಕೊಂಡ ಅನೇಕ ನಿದರ್ಶನಗಳು ನೋಡಬಹುದು.

**ಮ್ಯಾಜಿಸ್ಟಿಕ್ ! ಮ್ಯಾಜಿಸ್ಟಿಕ್ !**

ಮಾಯಾ ನಗರಿ ಬೆಂಗಳೂರಿನ ಮೆಜೆಸ್ಟಿಕ್ ಕುರಿತು ಈ ಪ್ರಬಂಧದಲ್ಲಿ ವಿವರಿಸಿದ್ದಾರೆ. ಬೆಂಗಳೂರು ಇಂದು ಜನದಟ್ಟಣಿಯ ನಗರಗಳಲ್ಲಿ ಒಂದು. ಗುಜರಾತ, ರಾಜಸ್ಥಾನ ಮುಂತಾದ ನಗರಗಳಿಂದ ಬಂದ ವ್ಯಾಪಾರಿಗಳು ಇಲ್ಲಿ ತಮ್ಮ ವ್ಯಾಪಾರ ವಹಿವಾಟು ಪ್ರಾರಂಭಿಸಿ ಖಾಯಂ ನಿವಾಸಿಯಾಗಿದ್ದಾರೆ. ಈ ಮೆಜೆಸ್ಟಿಕ್‌ನಲ್ಲಿ ಮೋಸದ ವ್ಯಾಪಾರವು ಸರಾಗವಾಗಿ ನಡೆಯುತ್ತದೆ. ಬೇರೆ ಕಡೆಯಿಂದ ಬಂದ ಹೊಸಬರಿಗೆ ಘುಸಲಾಯಿಸಿ ವ್ಯಾಪಾರ ಮಾಡುವ ಜನರಿದ್ದಾರೆ. ಸುಳ್ಳು ಹೇಳುವ ಜ್ಯೋತಿಷ್ಯನ ಹಿಡಿದು, ನಾಟಿ ಆಯುರ್ವೇದ ಪಂಡೀತರು, ಕೃತಕ ಮೀಸೆ ಮಾರುವವರು, ಬಟ್ಟೆ ವ್ಯಾಪಾರಿಗಳು ಹಳ್ಳಿಯಿಂದ ಬಂದ ಮುಗ್ಧ ಜನರಿಗೆ ಮೋಸ ಮಾಡಿ ಹಣ ಗಳಿಸುತ್ತಾರೆ.

ಇಂದು ಜನ ಬೆಂಗಳೂರನ್ನು ಕಲುಷಿತಗೊಳಿಸುವುದರ ಮೂಲಕ ಅಲ್ಲಿನ ವಾತಾವರಣವನ್ನು ಕೆಡಿಸುತ್ತಿದ್ದಾರೆ. ಮುಂಬೈನಲ್ಲಿ ನಡೆಯುತ್ತಿರುವ ಎಲ್ಲ ಕೆಟ್ಟ ಚಾಳಿಗಳು ಬೆಂಗಳೂರಿಗೂ ಪಾದಾರ್ಪಣೆ ಮಾಡಿವೆ. ಬೆಂಗಳೂರು ವಾಹನ ದಟ್ಟಣೆಯಿಂದ ವಾಯುಮಾಲಿನ್ಯದ ಸಮಸ್ಯೆಯನ್ನು ಎದುರಿಸುತ್ತಿದೆ. ಹೀಗಿರುವ ಬೆಂಗಳೂರಿನಲ್ಲಿ ದೇವಾಲಯಗಳ ಸಂಖ್ಯೆಗೆ ಏನೂ ಕಡಿಮೆಯಿಲ್ಲ. ಓಣಿಗೊಂದರಂತೆ ಮಂದಿರಗಳು ನಿರ್ಮಾಣವಾಗಿವೆ. ಮಾಯಾನಗರಿ ಇಂದು ಹೊಲಸು ನಗರಿಯಾಗುತ್ತಿರುವುದು ಒಂದು ವಿಪರ್ಯಾಸದ ಸಂಗತಿಯಾಗಿದೆ.

**'ಪರಕಾಸು' ನಡೆಸಿದ ಪ್ರಬಂಧ ಸ್ಪರ್ಧೆ**

ಲೇಖಕರ ಬಾಲ್ಯದ ಸ್ನೇಹಿತನಾದ ಪ್ರಕಾಶ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದನು. ಲೇಖಕರ ವಿಚಾರದಂತೆ ಪ್ರಬಂಧ ಶಿರ್ಷಿಕೆ "ಶ್ರೀ ಸಾಮಾನ್ಯನಿಗೆ ನಿಜವಾದ ಸ್ವಾತಂತ್ರ್ಯದ ಅರ್ಥ ದಕ್ಕಿದೆಯೇ" ಎಂಬುವುದಾಗಿತ್ತು. ಈ ಪ್ರಬಂಧಕ್ಕೆ ರಾಜ್ಯದ ನಾನಾ ಮೂಲೆಗಳಿಂದ ಪ್ರತಿಕ್ರಿಯೆಗಳು ಬಂದವು. ಅವುಗಳಲ್ಲಿ ಉತ್ತಮವೆನಿಸಿದ ಹತ್ತು ಪ್ರಬಂಧಗಳನ್ನು ಆಯ್ಕೆ ಮಾಡುವ ಜವಾಬ್ದಾರಿ ಪ್ರಕಾಶ ಲೇಖಕರಿಗೆ ವಹಿಸಿದನು. ಎಲ್ಲ ಪ್ರಬಂಧಗಳೂ ಸೇರಿ ಸುಮಾರು 300 ಕ್ಕೂ ಹೆಚ್ಚು ಪ್ರಬಂಧಗಳು ಬಂದಿದ್ದವು. ಆಯಾ ಪ್ರಬಂಧಗಳಲ್ಲಿ ಬೇರೆ ಬೇರೆ ವಿಷಯ ಒಳಗೊಂಡಿತ್ತು. 'ಕರಿಮಣಿ ಕಂಡೊಡಂ ಕೈ ಮುಗಿಯುಂ, ಕಾಣದೊಡಂ ಕಣ್ಣು ಹೊಡಿಯಿರಿ'. ಇದ್ದರೆ ಇನ್ನೊಂದರಲ್ಲಿ ಯಾರಿಗೆ ಬಂತು ಸ್ವಾತಂತ್ರ್ಯವೆಂದರೆ 'ಬಾಟಾಗೆ ಬಂತು ಬಿರ್ಲಾಗೆ ಬಂತು' ಅಧಿಕಾರಿಗಳ ಜೋಬಿಗೆ ಬಂತು ಖೋಡೆಗಳ ಬಾಟ್ಲಿಗೆ ಬಂತು. ಹೀಗೆ ನಾನಾ ವಿಷಯಗಳನ್ನು ಒಳಗೊಂಡ ಪ್ರಬಂಧಗಳು ಅವು ಲೇಖಕರಿಗೆ ಇನ್ನು ಸ್ಮರಣೀಯವಾಗಿವೆ.

**ಆಯುಷ್ಕರ್ಮ ಶಾಲೆಯಲ್ಲಿ**

'ಕೇಶಮುಂಡನ'ಕ್ಕೆ ಆಯುಷ್ಕರ್ಮವೆಂದು ಕರೆಯುತ್ತಾರೆ. ಕೂದಲು ಕತ್ತರಿಸುವವರನ್ನು ಹಜಾಮರು ಎಂದು ಕರೆಯುತ್ತಾರೆ. ಹುಲುಸಾಗಿ ಬೆಳೆದ ತಲೆಯ ಕೂದಲು ಕತ್ತರಿಸುವುದು, ಮುಖದ ಮೇಲೆ ಬೆಳೆದ ಕೂದಲನ್ನು ಶೇವ್ ಮಾಡುವುದು ಈ ಹಜಾಮರ ಕಾಯಕವಾಗಿದೆ. ಇದಕ್ಕೆ ತದ್ವಿರುದ್ಧವಾಗಿ ಲೇಖಕರು ಇಂದಿನ ಆಂಗ್ಲ ಮಾಧ್ಯಮದ ಶಾಲೆಗಳು ಜನರ ಜೇಬಿನಿಂದ ದುಡ್ಡನ್ನು ಸಲೀಸಾಗಿ ಬೋಳಿಸುತ್ತಿದ್ದಾರೆ. ಹೋಲಿಫೇತ್, ಹೋಲಿಸೆಫರ್ಡ್, ಸೆಂಟ್ ಮೇರಿ ಮುಂತಾದ ಹೆಸರಿನಿಂದ ಶಾಲೆಗಳನ್ನು ತೆರೆದು ಮೋಸಮಾಡಿ ಜನರಿಂದ ಹಣ ವಸೂಲಿ ಮಾಡುತ್ತಲಿದ್ದಾರೆ. ಬೇರೆ ರಾಷ್ಟ್ರದ ಹೆಸರುಗಳಿಂದ ತೆರೆಯಲ್ಪಟ್ಟ ಸ್ಕೂಲ್‌ಗಳು ಹಾಡು ಹಗಲೇ ಜನರಿಗೆ ಬೋಳಿಸುತ್ತಿವೆ.

ಇಂತಹ ಹಲವು ವಿಷಯಗಳನ್ನು ಚರ್ಚಿಸುತ್ತ ಲೇಖಕರು ತನ್ನೂರಿನ ನಾಪಿತ ಸಂಗಪ್ಪನ ಕೇಶಕರ್ತನ ಶಾಲೆಯನ್ನು ನೆನೆಸಿ, ಸಂಗಪ್ಪ ಅಲ್ಲಿ ವಿದ್ಯಾ ಕೇಂದ್ರದ ವಾತಾವರಣ ನಿರ್ಮಿಸಿದ್ದನ್ನು ತಿಳಿಸಿದ್ದಾರೆ. ದಿನಾ ನಾಲ್ಕಾರು ಪತ್ರಿಕೆಗಳನ್ನು ತರಿಸಿ ಅವುಗಳನ್ನು ಲೇಖಕರಿಂದ ಓದಿಸಿ ಸುದ್ದಿ ತಿಳಿದುಕೊಳ್ಳುವ ಹವ್ಯಾಸ ಸಂಗಪ್ಪ ಹೊಂದಿದ್ದನು. ಹೀಗೆ ಸಂಗಪ್ಪನ ಕೇಶ ಕರ್ತನ ಶಾಲೆ ಲೇಖಕರಲ್ಲಿ ಓದುವ ಹವ್ಯಾಸ ಬೆಳೆಸಿತು.

**ಹೀಗೊಂದು ಟಾಪ್ ಪ್ರಯಾಣ**

ಕೊಪ್ಪಳ ಬಸ್ ನಿಲ್ದಾಣದಿಂದ ಮುಂಡರಗಿಗೆ ಹೋದ ಒಂದು ಪ್ರಯಾಣದ ಅನುಭವವನ್ನು ಇಲ್ಲಿ ವಿವರಿಸಿದ್ದಾರೆ. ಲೇಖಕರು ತನ್ನ ತಂಗಿಯನ್ನು ಕಾಣಲು ತುಂಬಿದ ಬಸ್ಸಿನ ನಿಲ್ದಾಣದಲ್ಲಿ ಮುಂಡರಗಿಗೆ ಹೋಗುವ ಬಸ್ಸಿಗಾಗಿ ಕಾಯುತ್ತಿದ್ದರು. ಜನರಿಂದ ತುಂಬಿದ ಬಸ್ಸೊಂದು ಬಂದಿತ್ತು. ಆದರೆ ಬಸ್ಸು ಹತ್ತಲಾಗದೇ ಮುಂದಿನ ಬಸ್ಸಿಗಾಗಿ ಕಾದರು. ಆ ಬಸ್ಸು ಎರಡು ಗಂಟೆ ತಡವಾಗಿ ಬಂದಿತ್ತಾದರೂ ಆಗಲೆ ಅದರಲ್ಲಿ ಜನ ತುಂಬಿತು. ಈ ಬಸ್ಸು ತಪ್ಪಿದ್ದರೆ ಪುನಃ ರಾತ್ರಿ 9:00 ಗಂಟೆಯವರೆಗೆ ಕಾಯಬೇಕಾಗಿತ್ತು. ಆದ್ದರಿಂದ ಏನೂ ತೋಚದೇ ಆ ಬಸ್ಸಿನ ಟಾಪ್‌ನ ಮೇಲೆ ಕುಳಿತು ಪ್ರಯಾಣ ಬೆಳೆಸಿದರು. ಸುಡು ಬಿಸಿಲಿನ ಬ್ಯಾಸಿಗಿಗೆ ಬಸ್ಸಿನ ಟಾಪ್ ಕಾದ ಹಂಚಿನಂತೆ ಕಾಲಿಗೆ ಸುಡುತ್ತಿತ್ತು.

ಬಸ್ಸು ಹೋಗುತ್ತಿರುವ ಮಾರ್ಗಗಳಲ್ಲಿ ವಿದ್ಯುತ್ ತಂತಿಗಳು ಟಾಪಿಗೆ ತಗಲುವಂತೆ ನೇತಾಡುತ್ತಿದ್ದವು. ಆದರೆ ದಿನಾಲು ಪ್ರಯಾಣಿಸುತ್ತಿರುವ ಹಳ್ಳಿಗರಿಗೆ ಇದು ಸಾಮಾನ್ಯವಾಗಿತ್ತು. ಆದರೆ ಇದು ಲೇಖಕರಿಗೆ ಹೊಸ ಅನುಭವವಾಗಿತ್ತು. ಇಂತಹ ಅವಸ್ಥೆಗೆ ಯಾರು ಹೊಣೆಗಾರರು ? ಸರ್ಕಾರವೋ ? ಜನರೋ ? ಎಂದೆಲ್ಲ ತಮ್ಮಷ್ಟಕ್ಕೆ ತಾವೇ ಪ್ರಶ್ನಿಸುತ್ತ ಪ್ರಯಾಸದ ಪ್ರಯಾಣವನ್ನು ಮುಗಿಸಿದರು.

**ಶಬರಿಮಲೈ ರಿಮೋಟು**

ಅಯ್ಯಪ್ಪನ ಹೆಸರಿನ ಮೇಲೆ ತಿಂಗಳಗಟ್ಟಲೇ ಅಯ್ಯಪ್ಪ ಸ್ವಾಮಿಯ ನೇಮ ನಿಷ್ಠೆ ಪಾಲಿಸುತ್ತ ಕೆಟ್ಟ ಚಟದಿಂದ ದೂರವಿದ್ದು ಪೂಜೆ ಪನಸ್ಕಾರಗಳನ್ನು ಚಾಚೂ ತಪ್ಪದೇ ಪಾಲಿಸುವ ಭಕ್ತರನ್ನು ಈ ಪ್ರಬಂಧದಲ್ಲಿ ಟೀಕಿಸಿದ್ದಾರೆ. ನೂರಾರು ಜನ ಹೇಳಿದರೂ ಕೇಳದ ಈ ಕುಡುಕರು ಅಯ್ಯಪ್ಪ ಸ್ವಾಮಿಯ ಸಿದ್ದಿಗೆ ಮಣಿದು ಕುಡಿತದಿಂದ ದೂರವಿರುತ್ತಾರೆ. ದಿನದಲ್ಲಿ ಕನಿಷ್ಠ ಎರಡು ಸಾರಿಯಾದರೂ ಸ್ನಾನ ಮಾಡಿ ದೇವರನ್ನು ಧ್ಯಾನಿಸುತ್ತ ಭಜನೆ ಕೀರ್ತಗಳನ್ನು ಮಾಡುತ್ತಾರೆ. ಆ ಸಮಯದಲ್ಲಿ ಎಲ್ಲರಿಗೂ ಗೌರವಾದರಗಳಿಂದ ಮಾತನಾಡಿಸುತ್ತಾರೆ. ಕೊನೆಗೆ ಅಯ್ಯಪ್ಪ ಸ್ವಾಮಿಯ ಸನ್ನಿಧಿಗೆ ಹೋಗಿ ದರ್ಶನ ಪಡೆದು ಬಟ್ಟೆ ಕಳಚಿದ ತಕ್ಷಣ ಎಲ್ಲ ಭಾರ ಇಳಿಯಿತೆಂದು, ಖುಷಿಯಿಂದ ವಾಹನ ಚಾಲಕನನ್ನು ಸೇರಿಸಿದಂತೆ ಎಲ್ಲರೂ ಕಂಠಪೂರ್ತಿ ಸರಾಯಿ ಕುಡಿದು ಅದರ ಅಮಲಿನಲ್ಲಿಯೇ ವಾಹನದಲ್ಲಿ ಬೆಟ್ಟ ಇಳಿಯುವಾಗ ಅದರ ಆಯಾತಪ್ಪಿ ನೇರವಾಗಿ ಅಯ್ಯಪ್ಪನ ಸಾನಿಧ್ಯ ಸೇರಿದ ಹಲವು ನಿದರ್ಶನಗಳಿವೆ. ಸುಳ್ಳು ಹೇಳುವುದು, ನಿಂದೆ ಮಾಡುವುದು, ಕೆಟ್ಟ ಚಟದಿಂದ ದೂರವಿದ್ದ ಇಂತಹ ಢೋಂಗಿ ಭಕ್ತರ ತಾತ್ಕಾಲಿಕವಾಗಿ ಪರಿವರ್ತನೆ ಮಾಡಿದ ಅಯ್ಯಪ್ಪನ ಕುರಿತು ಲೇಖಕರು ಬಾಯ್ತುಂಬ ಹೊಗಳಿದ್ದಾರೆ.

ಈರಪ್ಪ ಎಂ. ಕಂಬಳಿಯವರ ಪ್ರಬಂಧಗಳು ನೈಜಂ ಕರ್ನಾಟಕಕ್ಕೆ ಸೇರಿದ ಹಳ್ಳಿಗಳ ಬದುಕು, ನಮ್ಮ ಸ್ಮೃತಿಪಟಲನದಲ್ಲಿ ಮೂರ್ತವಾಗಿ ಮೈರೆಳೆದು ನಿಲ್ಲುತ್ತದೆ. ಇವರ ಪ್ರಬಂಧದ ಜೀವಾಳವೆಂದರೆ ಇಲ್ಲಿ ಬಳಕೆಯಾಗಿರುವ ಲೇಖಕರ ಬಾಲ್ಯದ ಸಮೃದ್ಧವೂ ಆಪ್ತವೂ ಆದ ನೆನಪುಗಳು; ಇಲ್ಲಿನ ಸಹಜವು ಚುರುಕೂ ಆದ ಸಂಭಾಷಣೆಗಳು ಹಾಗೂ ಜೀವಂತದ ಪಾತ್ರಗಳು ಇವೆಲ್ಲವೂ ಒಂದು ಪ್ರಬಂಧವನ್ನು ಕಟ್ಟುವುದಕ್ಕೆ ಬೇಕಾದ ಸಂಗತಿಗಳು ಕೂಡ ಆಗಿವೆ.

ಬದುಕಿನ ವಾಸ್ತವ ಸಂಗತಿಗಳನ್ನು ತಮ್ಮ ಪ್ರಬಂಧದ ವಿಷಯಗಳನ್ನಾಗಿ ಬಳಸಿಕೊಂಡಿದ್ದಾರೆ. ಇವರ ಎಲ್ಲ ಪ್ರಬಂಧಗಳು ಸರಸವಾಗಿ ಓದಿಸಿಕೊಂಡು ಹೋಗುತ್ತವೆ. ಕೆಲ ಪ್ರಬಂಧಗಳು ಹಳ್ಳಿ ಬದುಕನ್ನು ಚಿತ್ರಿಸಿದ್ದರೆ ಇನ್ನು ಕೆಲ ಪ್ರಬಂಧಗಳು ನಗರ ಜೀವನದ ದಾವಂತ ಬದುಕನ್ನು ಚಿತ್ರಿಸುತ್ತವೆ. ಹೀಗೆ ತಮ್ಮ ಪ್ರಬಂಧಗಳಲ್ಲಿ ಎಲ್ಲ ವಿಷಯಗಳನ್ನೊಳಗೊಂಡಂತೆ ರಚಿಸಿ ಓದುಗರಿಗೆ ಸರಳವಾಗಿ ಓದಿಸಿಕೊಂಡು ಹೋಗುವಂತಹ ಪ್ರಬಂಧ ಸಂಕಲನಗಳನ್ನು ರಚಿಸಿದ್ದಾರೆ.

**ಆಡಿ ಟಿಪ್ಪಣಿಗಳು**

1. ಕಳ್ಳೀ ಹಾಲು : ಈರಪ್ಪ ಎಂ. ಕಂಬಳಿ ಪುಟ ಸಂಖ್ಯೆ : 01
2. ಹೀಗೊಂದು ಟಾಪ್ ಪ್ರಯಾಣ : – ಅದೇ – ಪುಟ ಸಂಖ್ಯೆ : 09
3. ಆಯ್ದ ಪ್ರಬಂಧಗಳು : ಡಾ. ಶೀಲಾಕುಮಾರಿ ದಾಸ ಪುಟ ಸಂಖ್ಯೆ : 99